ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಖರ್ಚಿನ ಬಗ್ಗೆ

2835 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಶಿಕ್ಷಕ ಮತ್ತು ವಿದ್ಯಾರ್ಥಿಗಳ ಪ್ರಮಾಣ ಎಷ್ಟು?

ಇ) ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟಕ್ಕಾಗಿ ಬರುವ ವರ್ಷ ರಾಜ್ಯ ಸರ್ಕಾರದ ಎಷ್ಟು ಖರ್ಚು ಮಾಡಲಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 69,51,000.

ಆ) 1:51.2.

ಇ) 1992-93ರ ಆಯವ್ಯಯವನ್ನು ಇನ್ನೂ ಸಿದ್ಧಪಡಿಸಲಾಗಿಲ್ಲದ ಕಾರಣ ಈಗಲೇ ನಿರ್ದಿಷ್ಟವಾಗಿ ಎಷ್ಟು ಖರ್ಚು ಮಾಡಲಾಗುವುದೆಂದು ಹೇಳಲು ಬರುವುದಿಲ್ಲ.

ಲೋಕಾಯುಕ್ತದ ಕಾರ್ಯ ವೈಖರಿ ಬಗ್ಗೆ

2832 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಾಯುಕ್ತ ಸ್ಥಾಪನೆಯಾದಾಗಿನಿಂದ ಈವರೆಗೆ ಯಾರಿಗಾದರೂ ದಂಡ ಶಿಕ್ಷೆ ಆಗಿದೆಯೇ?

ಆ) ಲೋಕಾಯುಕ್ತ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ಒಟ್ಟು ವೇತನ ಸೇರಿ ಆಗಿರುವ ಖರ್ಚು ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಆಗಿದೆ.

ಆ) ರೂ. 9,09,65,196-00

ಸಹಕಾರಿ ಕಾರ್ಖಾನೆಗಳಿಗೆ ನಾಮ ನಿರ್ದೇಶನ ಮಾಡುವುದರ ಬಗ್ಗೆ

2834 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ರಂಗದಲ್ಲಿ ಕಾರ್ಖಾನೆಗಳಿಗೆ ಸರ್ಕಾರದಿಂದ ನಾಮ ನಿರ್ದೇಶನ ಮಾಡುವುದು ಸರಿಯೆ?

ಆ) ನಾಮ ನಿರ್ದೇಶನಗಳು ಜನತಂತ್ರ ವಿರೋಧಿ ನೀತಿಯಲ್ಲವೆ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಸರಿ

ಆ) ಅಲ್ಲ